# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\278\2016\ಸನಿಕಾಸ-1

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:15/09/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೂರುದಾರರಾದ ಶ್ರೀ.ನಾಗರಾಜ್ ಬಿನ್ ಈರಣ್ಣ, ಕೆರೆಗಳ ಪಾಳ್ಯ, ಚಿಣಕವಜ್ರ ಮಜರಾ, ಕಸಬಾ ಹೋಬಳಿ, ಮಧುಗಿರಿ ತಾಲ್ಲೂಕ್, ತುಮಕೂರು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*******

ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕ್ ಕಸಬಾ ಹೋಬಳಿ ಚಿಣಕವಜ್ರ ಮಜರಾ ಕೆರೆಗಳ ಪಾಳ್ಯ ನಿವಾಸಿಯಾದ ಶ್ರೀ.ನಾಗರಾಜ್ ಬಿನ್ ಈರಣ್ಣ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕ್ 1) ಮದುಗಿರಿ ಉಪವಿಭಾಗದ ಉಪವಿಭಾಗಾಧಿಕಾರಿ ಮತ್ತು 2) ತಹಶೀಲ್ದಾರ್ (ಇನ್ನು ಮುಂದೆ "1 ಮತ್ತು 2ನೇ ಎದುರುದಾರ" ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕ್ ಕಸಬಾ ಹೋಬಳಿಗೆ ಸೇರಿದ ಚಿನಕವಜ್ರ ಗ್ರಾಮದ ಸರ್ವೆ ನಂ.71ರ ಸರ್ಕಾರಿ ಜಮೀನಿಗೆ ಎದುರುದಾರರು ಅಕ್ರಮವಾಗಿ ಮಾರಾಟ ದಾಖಲೆ ಸೃಷ್ಟಿಸಿಕೊಂಡು ಅಕ್ರಮವಾಗಿ ಮಾರಾಟ ಮಾಡಿಕೊಂಡು ಸರ್ಕಾರಕ್ಕೆ ಮತ್ತು ಸಾರ್ವಜನಿಕರಿಗೆ ನಷ್ಟ ಪಡಿಸಿರುವುದಾಗಿ ಹೇಳಿದ್ದಾರೆ.

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ -

> ಸದರಿ ಜಮೀನಿಗೆ ಸಂಬಂಧಿಸಿದಂತೆ ತಹಶೀಲ್ದಾರ್‌ರವರಿಂದ ವರದಿ ಸ್ವೀಕೃತವಾಗದ ಕಾರಣ ನೆನಪೋಲೆ ನೀಡಲಾಗಿದ್ದು, ತಹಶೀಲ್ದಾರ್ ಮಧುಗಿರಿ ರವರ ವರದಿ ಪ್ರಕಾರ ಪ್ರಕರಣ ಸಂ:ಎಸ್‌ಆರ್‌ಟಿಡಿಪಿಹೆಚ್.3/73-74 ದಿನಾಂಕ:26/03/1992ರ ಪತ್ರದ ಮೂಲಕ ಮಾನ್ಯ ಜಿಲ್ಲಾಧಿಕಾರಿಗಳು, ತುಮಕೂರು ರವರಿಗೆ ತಹಶೀಲ್ದಾರ್, ಮಧುಗಿರಿ ತಾಲ್ಲೂಕ್ ರವರಿಂದ

ಸಲ್ಲಿಸಲಾಗಿರುವ ಪೂರ್ಣ ಕಡತವು ಅವಶ್ಯಕವಿದೆ. ಸದರಿ ಕಡತವನ್ನು ತಹಶೀಲ್ದಾರ್, ಮಧುಗಿರಿ ತಾಲ್ಲೂಕ್ ರವರಿಗೆ ಹಿಂದಿರುಗಿಸಲು ತಮ್ಮ ಕಛೇರಿಯಿಂದ ಜಿಲ್ಲಾಧಿಕಾರಿಗಳು, ತುಮಕೂರು ರವರಿಗೆ ಪತ್ರ ಬರೆಯಲಾಗಿದೆ, ಸದರಿ ಮೂಲ ಕಡತ ಲಭ್ಯವಿಲ್ಲದೇ ಯಾವುದೇ ಆದೇಶ ಮಾಡಲು ಸಾಧ್ಯವಿಲ್ಲವೆಂದು ಹೇಳಿದ್ದಾರೆ.

4. ಎರಡನೇ (2ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಸದರಿ ಜಮೀನಿಗೆ ಸಂಬಂಧಿಸಿದಂತೆ ದಿ:22/09/1944ರಲ್ಲಿ ವಿಶೇಷ ದರಖಾಸ್ತು ಉಪವಿಭಾಗಾಧಿಕಾರಿಗಳವರು ಶ್ರೀ.ನಾಗಣ್ಣ ಮತ್ತು ಇತರೆ 15 ಮಂದಿಗೆ ಹಂಗಾಮಿಯಾಗಿ ಜಮೀನು ಗುತ್ತಿಗೆ ಮುಚ್ಚಳಿಕೆ ಆಧಾರದ ಮೇಲೆ ಮಂಜೂರಾಗಿದ್ದು, ಮಂಜೂರಿದಾರರು ಗುತ್ತಿಗೆ ಅವಧಿ ಮುಗಿದ ನಂತರ ಜಮೀನನ್ನು ಸರ್ಕಾರಕ್ಕೆ ಬಿಟ್ಟುಕೊಡದೇ ಇದ್ದರಿಂದ, ದಿ:14/02/1943ನೇ ಸಾಲಿನಿಂದ 5 ವರ್ಷಗಳ ಕಾಲ ಮಾತ್ರ ಗುತ್ತಿಗೆಗೆಂದು ಸಾಗುವಳಿ ಚೀಟಿಯಲ್ಲಿ ನಮೂದಿಸಲಾಗಿದೆ. ಆ ನಂತರ, ತಮ್ಮ ಕಛೇರಿಯಿಂದ ಎಲ್ಲಾ ಮಂಜೂರಿದಾರರಿಗೂ ಖುಲ್ಲಾ ಮಾಡಲು ದಿ:09/04/92ರಂದು ನೋಟೀಸ್ ನೀಡಲಾಗಿದೆ. ದಿ:26/03/1992ರಂದು ಸದರಿ ಕಡತವು ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ಸಲ್ಲಿಸಲಾಗಿದ್ದು, ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿಯಿಂದ ಈವರೆವಿಗೂ ಸಹ ಮೂಲ ಧರಖಾಸ್ತು ಮಂಜೂರಿ ಕಡತ ವಾಪಸ್ ಬಂದಿಲ್ಲ, ಈ ಬಗ್ಗೆ ಹಲವಾರು ಬಾರಿ ಪತ್ರ ಬರೆಯಲಾಗಿದೆಯೆಂದು ಹೇಳಿದ್ದಾರೆ.

5. ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ಎದುರುದಾರರ ಆಕ್ಷೇಪಣೆಯ ಅಂಶಗಳನ್ನು ಅಲ್ಲಗಳೆದು, ದೂರಿನಲ್ಲಿನ ಅಂಶಗಳನ್ನೇ ಪುನರುಚ್ಛರಿಸಿ ಪ್ರತ್ಯುತ್ತರವನ್ನು ಸಲ್ಲಿಸಿದ್ದಾರೆ.

6. ದೂರಿನ ಬಗ್ಗೆ ತನಿಖೆ ಕೈಗೊಂಡು ವರದಿ ಸಲ್ಲಿಸುವಂತೆ 1ನೇ ಎದುರುದಾರರನ್ನು ಕೇಳಲಾಗಿ, ಸದರಿಯವರು ತಮ್ಮ ವರದಿಯಲ್ಲಿ –

ಸದರಿ ಜಮೀನಿಗೆ ಸಂಬಂಧಪಟ್ಟ ಸಂಪೂರ್ಣ ಕಡತವನ್ನು ತುಮಕೂರು ಜಿಲ್ಲಾಧಿಕಾರಿ ರವರಿಂದ ಪಡೆದು ಪರಿಶೀಲಿಸಲಾಗಿ, ಶ್ರೀ.ಬಿ.ವೆಂಕಟೇಗೌಡ ಬಿನ್ ಪೂಜಾರ ತಿಮ್ಮಯ್ಯ ರವರಿಗೆ ದಿ:05/04/1945ರಲ್ಲಿ 5 ವರ್ಷಗಳ ಕಾಲ ಗುತ್ತಿಗೆ ಆಧಾರದ ಮೇಲೆ ಹಂಗಾಮಿ ಸಾಗುವಳಿ ಚೀಟಿ ನೀಡಿದ್ದು, ಅದರ ಆಧಾರದ ಮೇಲೆ ದಿನಾಂಕ:18/04/1971ರಂದು ಶ್ರೀ.ಫಕ್ರುದ್ದೀನ್ ಸಾಬ್ ಎಂಬುವವರಿಗೆ ಮಾರಾಟ ಮಾಡಿದ್ದು, ಆ ನಂತರ ಸದರಿಯವರು ಶ್ರೀಮತಿ.ಲಕ್ಷ್ಮಮ್ಮ ಎಂಬುವವರಿಗೆ ದಿ:15/09/1976ರಂದು ಮಾರಾಟ ಮಾಡಿದ್ದಾರೆ. ಸದರಿ ಜಮೀನು ಸರ್ವೆ ನಂ.71 ದುರಸ್ತಿಯಾಗಿ 236/1 ರಿಂದ 5 ಎಂದು ಪೋಡಾಗಿದೆ. ಸದರಿ ಜಮೀನಿನಲ್ಲಿ ಶ್ರೀ.ಹೆಚ್.ಸಿ.ಮದು ಕೋಂ ಸಿದ್ದಲಿಂಗಮೂರ್ತಿ ರವರಿಗೆ 38 ಗುಂಟೆ, ಶ್ರೀ.ಸಿದ್ದಪ್ಪ ಬಿನ್ ದೊಡ್ಡಲಿಂಗಪ್ಪ ರವರಿಗೆ 16 ಗುಂಟೆ, ಶ್ರೀ.ರಾಮಚಂದ್ರಯ್ಯ,

ಶ್ರೀ.ರಾಜಗೋಪಾಲ, ಶ್ರೀ.ಲಕ್ಷ್ಮಿಕಾಂತ ಮತ್ತು ಶ್ರೀಮತಿ.ಸಿದ್ದಮ್ಮ ರವರಿಗೆ ಕ್ರಮವಾಗಿ, 34 ಗುಂಟೆ ಮತ್ತು 31 ಗುಂಟೆ ಜಂಟಿಯಾಗಿ ನಮೂದಾಗಿರುವುದು ಕಂಡು ಬಂದಿದೆ. ಆದರೆ, ಶ್ರೀ.ಬಿ.ವೆಂಕಟೇಗೌಡ ಬಿನ್ ಪೂಜಾರ ತಿಮ್ಮಯ್ಯ ರವರಿಗೆ ಮಂಜೂರಾದ 4 ಎಕರೆ ಜಮೀನು ಮಂಜೂರಾತಿಗೆ ವಿರುದ್ಧವಾಗಿದ್ದು, ಸದರಿ ವಹಿವಾಟುಗಳ ಬಗ್ಗೆ ಹಾಗೂ ಎಂಆರ್ ಗಳ ರದ್ದುಪಡಿಸಲು ಕೋರಿ, 1ನೇ ಎದುರುದಾರರಿಗೆ ಪತ್ರ ಬರೆದಿದ್ದು, ಆದೇಶ ಬಂದ ನಂತರ ಸರ್ಕಾರದ ವಶಕ್ಕೆ ಪಡೆಯಲಾಗುವುದೆಂದು ಹೇಳಿದ್ದಾರೆ.

7. ಒಂದನೇ (1ನೇ) ಎದುರುದಾರರ ವರದಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ವರದಿಯ ಅಂಶಗಳನ್ನು ಅಲ್ಲಗಳೆದಿದ್ದಾರೆ.

8. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಸದರಿ ಜಮೀನು ಮೂಲತಃ ಸರ್ಕಾರದ ಜಮೀನಾಗಿದ್ದು, ಸದರಿ ಜಮೀನನ್ನು ದಿ:22/09/1964ರಲ್ಲಿ ವಿಶೇಷ ದರಖಾಸ್ತು ಉಪವಿಭಾಗಾಧಿಕಾರಿಗಳವರು ಸುಮಾರು 15 ಮಂದಿ ಫಲಾನುಭವಿಗಳಿಗೆ ಹಂಗಾಮಿ ಗುತ್ತಿಗೆ ಆಧಾರದ ಮೇಲೆ 5 ವರ್ಷಗಳವರೆಗೆ ಮಂಜೂರಾತಿ ನೀಡಿದ್ದು, ಆ ಅವಧಿ ಮುಕ್ತಾಯಗೊಂಡಿದೆ. ಆದರೆ, ಸದರಿ ಮಂಜೂರಾದ ಫಲಾನುಭವಿಗಳು ಅವಧಿ ಮುಗಿದ ನಂತರ ಷರತ್ತಿನಂತೆ ಖುಲ್ಲಾ ಮಾಡದೇ, ಕೆಲವೊಂದು ಜಮೀನುಗಳನ್ನು ಮಾರಾಟ ಮಾಡಿರುವುದು ಸಹ ಕ್ರಯಪತ್ರದಲ್ಲಿ ಕಂಡು ಬಂದಿದೆ. ಆದರೆ, ಆ ಹಂಗಾಮಿ ಧರಖಾಸ್ತು ಜಮೀನನ್ನು ಯಾವ, ಯಾವ ಫಲಾನುಭವಿಗಳಿಗೆ ಮಂಜೂರು ಮಾಡಲಾಗಿದೆ? ಎಂಬ ಅಂಶವನ್ನು ಇತ್ಯರ್ಥಪಡಿಸಲು ಮೂಲ ಕಡತದ ಅವಶ್ಯವಿದೆ. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿರುವಂತೆ, ಸದರಿ ಜಮೀನಿಗೆ ಸಂಬಂಧಪಟ್ಟಂತೆ ಹಂಗಾಮಿ ಧರಖಾಸ್ತು ಜಮೀನನ್ನು ಅಂದಿನ ಉಪವಿಭಾಗಾಧಿಕಾರಿಗಳು 15 ಮಂದಿ ಫಲಾನುಭವಿಗಳಿಗೆ ಹಂಗಾಮಿ ಗುತ್ತಿಗೆ ಆಧಾರದ ಮೇಲೆ 5 ವರ್ಷಗಳ ಕಾಲ ಮಂಜೂರಾತಿ ನೀಡಿದ್ದು, ಆ ಅವಧಿಯು ಮುಕ್ತಾಯಗೊಂಡಿದೆ. ಆದರೆ, ಸದರಿ ಮಂಜೂರಾದ ಫಲಾನುಭವಿಗಳು ಅವಧಿ ಮುಗಿದ ನಂತರ ಷರತ್ತುಗಳಂತೆ ಖುಲ್ಲಾ ಮಾಡದೇ ಕೆಲವೊಂದು ಜಮೀನುಗಳನ್ನು ಮಾರಾಟ ಮಾಡಿರುವುದು ಕಂಡು ಬಂದಿದೆ. ಸದರಿ ಅನಧಿಕೃತ ಸಾಗುವಳಿದಾರರಿಗೆ ಸಂಬಂಧಪಟ್ಟಂತೆ, ಕ್ರಮ ಕೈಗೊಳ್ಳುವಂತೆ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ಕಲಂ 136(2)ರಡಿ ಪ್ರಕರಣ ಸಂಖ್ಯೆ:ಆರ್‌ಆರ್‌ಟಿ 293/16–17ರಂತೆ ತಹಶೀಲ್ದಾರ್ ವರದಿಯನ್ವಯ ಪ್ರಕರಣ ದಾಖಲಿಸಿದ್ದು, 2ನೇ ಎದುರುದಾರರು ಸದರಿ ಒತ್ತುವರಿದಾರರನ್ನು ಕಾನೂನು ರೀತಿ ತೆರವುಗೊಳಿಸುವ ಬಗ್ಗೆ ಮತ್ತು ಈ ಹಿಂದೆ ಮಾಡಲಾದ ಎಂಆರ್ 23/71–72 ಮತ್ತು ಎಂಆರ್ 7/76–77ನ್ನು ರದ್ದುಪಡಿಸಿ ಆದೇಶಿಸಿದ್ದಾರೆ. ಆದರೆ, 2ನೇ ಎದುರುದಾರರು ಸದರಿ ಜಮೀನಿನಲ್ಲಿ ಅನಧಿಕೃತ ಸಾಗುವಳಿದಾರರು ಮತ್ತು ಹಂಗಾಮಿ ಮಂಜೂರಾತಿದಾರರನ್ನು ತೆರವುಗೊಳಿಸುವ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ. 1ನೇ ಎದುರುದಾರರು ಪ್ರಕರಣ ಸಂ: ಆರ್‌ಆರ್‌ಟಿ 293/16–17ನ್ನು ದಿ:12/06/17ರಂದು ಆದೇಶಿಸಿದ್ದು, ಸದರಿ ಆದೇಶದಂತೆ ಕ್ರಮ ಕೈಗೊಳ್ಳಬೇಕಾಗಿದೆ.

Sd/-

9. ಆದ್ದರಿಂದ, ಸರ್ವೆ ನಂ.71ರ ಜಮೀನಿಗೆ ಸಂಬಂಧಪಟ್ಟ 1ನೇ ಎದುರುದಾರರ ಪ್ರಕರಣ ಸಂ: ಆರ್‌ಆರ್‌ಟಿ 293/16–17ನ್ನು ದಿ:12/06/17ರ ಆದೇಶದಂತೆ ಸದರಿ ಜಮೀನಿನ ಅನಧಿಕೃತ ಸಾಗುವಳಿದಾರರನ್ನು ನಿಯಮಾನುಸಾರ ತೆರವುಗೊಳಿಸಿ, ಸದರಿ ಜಮೀನನ್ನು ಸರ್ಕಾರದ ವಶಕ್ಕೆ ಪಡೆದುಕೊಳ್ಳುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

10. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 15/9/17.

(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)
ಉಪಲೋಕಾಯುಕ್ತ-2,
ಕರ್ನಾಟಕ ರಾಜ್ಯ.